
# ಜಿಪುಣಾಗ್ರೇಸರ



ಒಂದೂರಿನಲ್ಲಿ ಸೋಮನೆಂಬ ಜಿಪುಣನಿದ್ದನು. ಅವನಿಗೆ ಎಲ್ಲಿಲ್ಲದ ಹಣದ ವ್ಯಾಮೋಹವಿತ್ತು. ಸೋಮ ಹಣಕ್ಕಾಗಿ ಯಾವ ಕೆಲಸವನ್ನು ಬೇಕಾದರೂ ಮಾಡುತ್ತಿದ್ದ. ಅದೊಂದು ದಿನ ಸೋಮನ ಹೆಂಡತಿಗೆ ಮಾವಿನ ಹಣ್ಣನ್ನು ತಿನ್ನುವ ಆಸೆಯಾಯಿತು. ಮಾವಿನಹಣ್ಣು ಕೊಳ್ಳುವುದರಿಂದ ಹಣ ಖರ್ಚು ಆಗುತ್ತದೆಂದು ಎಷ್ಟು ಹೇಳಿದರೂ ಅವಳು ಅವನ ಮಾತನ್ನು ಕೇಳಲಿಲ್ಲ. ಕೊನೆಗೆ ಹೆಂಡತಿಯು ಮಾವಿನ ಹಣ್ಣನ್ನು ತಿನ್ನಲೇ ಬೇಕೆಂದು ಹಟ ಹಿಡಿದಾಗ ಹಣ್ಣನ್ನು ತರಲೆಂದು ಸೋಮ ಪೇಟೆಗೆ ಹೊರಟನು.

ಸೋಮ ಪೇಟೆಗೆ ಹೋಗಿ ಅಂಗಡಿಯಲ್ಲಿ ಮಾವಿನಹಣ್ಣಿನ ಬೆಲೆಯನ್ನು ವಿಚಾರಿಸಿದನು. ಅಂಗಡಿಯವನು 'ಒಂದು ಮಾವಿನಹಣ್ಣಿನ ಬೆಲೆ ಹತ್ತು ರೂಪಾಯಿ' ಎಂದು ಹೇಳಿದನು.

ಆಗ ಸೋಮನು 'ಒಂದು ಹಣ್ಣಿನ ಬೆಲೆ ಹತ್ತು ರೂಪಾಯಿಯೇ? ಬೆಲೆ ಜಾಸ್ತಿಯಾಯಿತು.ಕಡಿಮೆ ಬೆಲೆಗೆ ಕೊಡಲು ಸಾಧ್ಯವಿಲ್ಲವೇ?' ಎಂದು ಕೇಳಿದ.

ವ್ಯಾಪಾರಿಯು ಸೋಮನ ಜಿಪುಣತನವನ್ನು ನೋಡಿ 'ನಮ್ಮ ಅಂಗಡಿಯಲ್ಲಿ ಇದೇ ಬೆಲೆ. ನಿಮಗೆ ಕಡಿಮೆ ಬೆಲೆಗೆ ಮಾವಿನಹಣ್ಣು ಬೇಕಿದ್ದರೆ ದೊಡ್ಡ ಮಾರುಕಟ್ಟೆಗೆ ಹೋಗಿ' ಎಂದು ಹೇಳಿದ.

ಸೋಮ ವ್ಯಾಪಾರಿಯ ಮಾತಿನಂತೆ ದೂರದಲ್ಲಿದ್ದ ಮಾರುಕಟ್ಟೆಗೆ ಹೋದನು. ಅಲ್ಲಿ ಮಾವಿನಹಣ್ಣಿನ ಬೆಲೆಯನ್ನು ವಿಚಾರಿಸಿದನು. ಮಾರುಕಟ್ಟೆಯಲ್ಲಿದ್ದ ಹಣ್ಣಿನ ವ್ಯಾಪಾರಿ 'ಒಂದು ಮಾವಿನಹಣ್ಣಿನ ಬೆಲೆ ಐದು ರೂಪಾಯಿ' ಎಂದನು. ಆಗ ಸೋಮ ಅವನಲ್ಲಿ 'ಇನ್ನು ಕಡಿಮೆ ಬೆಲೆಗೆ ಹಣ್ಣು ಸಿಗುವುದಿಲ್ಲವೇ?' ಎಂದು ಕೇಳಿದ. ಅದಕ್ಕವನು 'ಇಲ್ಲಿಂದ ನಾಲ್ಕು ಮೈಲಿ ದೂರ ಹೋದರೆ ಅಲ್ಲಿ ಮಾವಿನಹಣ್ಣಿನ ರಾಶಿಯನ್ನು ಹಾಕಿಕೊಂಡು ಮಾರುವ ಅಂಗಡಿಯವರು ಇರುತ್ತಾರೆ. ಅಲ್ಲಿಗೆ ಹೋದರೆ ಇನ್ನೂ ಕಡಿಮೆ ಬೆಲೆಗೆ ಹಣ್ಣುಗಳು ಸಿಗಬಹುದು' ಎಂದನು.

ಸೋಮ ಕಡಿಮೆ ಬೆಲೆಗೆ ಮಾವಿನಹಣ್ಣು ಸಿಗುವುದಾದರೆ ಎಷ್ಟೇ ದೂರವಿರುವ ಅಂಗಡಿಗೂ ಹೋಗಲು ತಯಾರಿದ್ದನು.ಅವನು ನಾಲ್ಕು ಮೈಲಿ ದೂರದಲ್ಲಿರುವ ದೊಡ್ಡ ಅಂಗಡಿಗೆ ಕಾಲ್ನಡಿಗೆಯಲ್ಲಿಯೇ ಸಾಗಿದ.ಅಲ್ಲಿರುವ ಅಂಗಡಿಯಲ್ಲಿ 'ಒಂದು ಮಾವಿನಹಣ್ಣಿನ ಬೆಲೆ ಎಷ್ಟು?' ಎಂದು ಕೇಳಿದ. ವ್ಯಾಪಾರಿಯು 'ಎರಡು ರೂಪಾಯಿಗೆ ಒಂದು ಹಣ್ಣು' ಎಂದು ಹೇಳಿದ.

'ಸ್ವಾಮಿ, ಇನ್ನೂ ಕಡಿಮೆ ಬೆಲೆಗೆ ಹಣ್ಣು ಸಿಗುವುದಿಲ್ಲವೇ?' ಎಂದು ವ್ಯಾಪಾರಿಯಲ್ಲಿ ಸೋಮ ಕೇಳಿದ. ವ್ಯಾಪಾರಿಯು ಸೋಮನ ಜಿಪುಣತನವನ್ನು ನೋಡಿ ನಗುತ್ತ, 'ಅಯ್ಯಾ ಇಲ್ಲಿಂದ ಆರು ಮೈಲಿ ದೂರದಲ್ಲಿ ಒಂದು ಮಾವಿನ ತೋಪು ಇದೆ. ಅಲ್ಲಿ ಬೇಕಾದಷ್ಟು ಹಣ್ಣುಗಳಿರುತ್ತವೆ. ಆ ತೋಪಿನ ಮಾಲೀಕರನ್ನು ವಿಚಾರಿಸಿ ನೋಡಿ. ಇನ್ನೂ ಕಡಿಮೆ ಬೆಲೆಗೆ ಹಣ್ಣು ನಿಮಗೆ ಸಿಗಬಹುದು' ಎಂದನು.

ಸೋಮ ಅಲ್ಲಿಂದ ಆರು ಮೈಲಿ ದೂರದಲ್ಲಿರುವ ಮಾವಿನ ತೋಪಿಗೆ ಬರಿಗಾಲಿನಲ್ಲಿ ನಡೆದು ಹೋದನು. ಅಲ್ಲಿ ತೋಟದ ಮಾಲೀಕ ಮಾವಿನ ಮರದಿಂದ ಹಣ್ಣುಗಳನ್ನು ಕುಯ್ಯುತ್ತಿದ್ದನು. ಸೋಮ ಅವನಲ್ಲಿ 'ಒಂದು ಮಾವಿನಹಣ್ಣಿನ ಬೆಲೆ ಎಷ್ಟು?' ಎಂದು ಕೇಳಿದ. ತೋಟದ ಮಾಲೀಕನು 'ಒಂದು ಹಣ್ಣಿಗೆ ಒಂದು ರೂಪಾಯಿ' ಎಂದು ಹೇಳಿದ. ಆಗ ಸೋಮನು ಮನಸ್ಸಿನಲ್ಲಿ 'ಅಷ್ಟು ಬೆಲೆ ಏಕೆ ಕೊಡಬೇಕು?' ಎಂದುಕೊಂಡನು. 'ಇನ್ನೂ ಕಡಿಮೆ ಬೆಲೆಗೆ ಹಣ್ಣು ಸಿಗುವುದಿಲ್ಲವೇ?' ಎಂದು ಕೇಳಿದ.

ಸೋಮನ ಮಾತನ್ನು ಕೇಳಿ ತೋಟದ ಮಾಲೀಕನು 'ನೀನೇ ಮರ ಹತ್ತಿ ಐವತ್ತು ಹಣ್ಣುಗಳನ್ನು ಕಿತ್ತು ಹಾಕು. ಆಗ ಒಂದು ಹಣ್ಣನ್ನು ನಿನಗೆ ಉಚಿತವಾಗಿ ಕೊಡುತ್ತೇನೆ' ಎಂದನು.

ಸೋಮನಿಗೆ ಮಾಲೀಕನ ಮಾತನ್ನು ಕೇಳಿ ಹೇಳತೀರದಷ್ಟು ಸಂತೋಷವಾಯಿತು. ಇಷ್ಟು ದೂರ ಕಷ್ಟಪಟ್ಟು ನಡೆದು ಬಂದದ್ದು ಸಾರ್ಥಕ ಎನಿಸಿತು. ಸೋಮನು ಮರವನ್ನು ಹತ್ತಿ ಐವತ್ತು ಹಣ್ಣುಗಳನ್ನು ಕಿತ್ತು ಹಾಕಿದ. ಇನ್ನೇನು ಮರದಿಂದ ಇಳಿಯಬೇಕು ಎನ್ನುವಾಗ ಆತುರದಿಂದ ಮರದಿಂದ ಕೆಳಗೆ ಜಾರಿದ. ಆದರೆ ಅದೃಷ್ಟವಶದಿಂದ ಅಲ್ಲಿಯೇ ಇದ್ದ ಮರದ ಟೊಂಗೆಯನ್ನು ಗಟ್ಟಿಯಾಗಿ ಹಿಡಿದುಕೊಂಡ. ಸೋಮ ತನ್ನಿದ್ದ ಜಾಗದಿಂದ ಕೆಳಗೆ ನೋಡಿದ. ಅಲ್ಲೊಂದು ಆಳವಾದ ಹಳ್ಳವಿತ್ತು.ಹಳ್ಳಕ್ಕೆ ಬಿದ್ದರೆ ಜೀವ ಹೋಗುವುದು ಗ್ಯಾರಂಟಿಯೆಂದುಕೊಂಡ. ಸೋಮನಿಗೆ ಜೀವ ಭಯ ಜಾಸ್ತಿಯಾಯಿತು. ಕೈಯಲ್ಲಿ ಗಟ್ಟಿಯಾಗಿ ಮರದ ಟೊಂಗೆಯನ್ನು ಇನ್ನೂ ಬಿಗಿಯಾಗಿ ಹಿಡಿದುಕೊಂಡ.

ಅದೇ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಆನೆ ಸವಾರಿ ಮಾಡಿಕೊಂಡು ಮಾವುತನೊಬ್ಬ ಬರುವುದನ್ನು ಸೋಮ ನೋಡಿದ. ಸೋಮ ಮಾವುತನ್ನು ಜೋರಾಗಿ ಕೂಗಿ ಕರೆದ. 'ಮಾವುತ. ನನ್ನನ್ನು ರಕ್ಷಿಸು. ನಾನು ಹಳ್ಳಕ್ಕೆ ಬೀಳದಂತೆ ನನ್ನ ಕಾಲನ್ನು ಹಿಡಿದುಕೊ. ನಿನಗೆ ನೂರು ರೂಪಾಯಿ